ಮುಂಚಿತವಾಗಿ ತೆಳುವಾಗಿ ತಟ್ಟಿ ಇರಿಸಿದ್ದ ಖಡಕ್ ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ, ಶೇಂಗಾ ಎಳ್ಳಿನ ಹೋಳಿಗೆ, ಕೊಬ್ಬರಿ ಹೋಳಿಗೆ, ಶೇಂಗಾ ಉಂಡೆ, ಎಳ್ಳು ಬೆಲ್ಲ (ಸಕ್ಕರೆ) ಶೇಂಗಾ, ಸಕ್ಕರೆ ಅಚ್ಚು, ಕೊಬ್ಬರಿಯೂ ಹೊರ ಭೋಜನದ ಬುಟ್ಟಿಯನ್ನು ಸೇರುತ್ತವೆ. ಬುಟ್ಟಿಗಳನ್ನು ಹೊತ್ತ ರೈತಾಪಿ ವರ್ಗದವರು ಕಾಲ್ನಡಿಗೆ, ಇಲ್ಲವೆ ಎತ್ತಿನ ಬಂಡಿಯಲ್ಲಿ ನದಿ, ಕೆರೆಯಂತಹ ಪುಣ್ಯ ಸ್ಥಳಕ್ಕೆ ಹೆಜ್ಜೆ ಹಾಕುವುದನ್ನು ದೂರದ ಎತ್ತರದ ಪ್ರದೇಶದಿಂದ ನೋಡಿದರೆ, ನದಿ ಹಾದಿಯ ಹಿಡಿದು ಸರತಿ ಸಾಲಿನಲ್ಲಿ ಹೋಗುವವರು ಇರುವೆ ಸಾಲಿನಂತೆ ಕಾಣಿಸುತ್ತಾರೆ. ಉಳ್ಳವರು ಟಿಫನ್ ಕ್ಯಾರಿಯರ್ ಬಾಕ್ಸ್‌ಗಳಲ್ಲಿ ಹಬ್ಬದ ಊಟವನ್ನು ತುಂಬಿಟ್ಟುಕೊಂಡು ಟ್ರ್ಯಾಕ್ಟರ್, ಕಾರು, ಬೈಕ್, ಜೀಪ್, ಕ್ರೂಸರ್, ಟೆಂಪೊ ಟ್ರಾವಲ್‌ನಲ್ಲಿ ಸಾಗುವರು. ಹೀಗೆ ಸಂಕ್ರಮಣದ ಪುಷ್ಕಳ ಭೋಜನದ ಬುಟ್ಟಿ, ಟಿಫನ್ ಕ್ಯಾರಿಯರ್‌ಗಳನ್ನು ಹೊತ್ತು ತಂದವರು ಕೃಷ್ಣಾ, ತುಂಗಾಭದ್ರ ಹಾಗೂ ಭೀಮಾ ನದಿಗಳ ಪುಣ್ಯ ಕ್ಷೇತ್ರಗಳು, ನದಿಗಳ ಸಂಗಮ, ಉಪನದಿಗಳ ಧಾರ್ಮಿಕ ಕೇಂದ್ರಗಳು, ಮಂದಿರಗಳ ಸಮೀಪದ ಕೆರೆ– ಕಟ್ಟೆಗಳ ಬಳಿ ಪ್ರವಾಹದೋಪಾದಿಯಾಗಿ ಬಂದು ನೆರೆಯುವರು.

ಮುಖ್ಯವಾಗಿ, ದಕ್ಷಿಣದ ಕಾಶಿ ಎಂದೇ ಹೆಸರಾಗಿರುವ ಹಾಗೂ ಧರ್ಮ ಸಮನ್ವಯದ ಕೃಷ್ಣಾ ತೀರದ ತಿಂಥಣಿ, ಸೂರ್ಯನ ಪತ್ನಿ ಛಾಯಾಭಗವತಿ (ಪ್ರತೀತಿ) ನೆಲೆಸಿರುವ 18 ತೀರ್ಥಗಳ ಛಾಯಾಭಗವತಿ; ತುಂಗಾಭದ್ರ ದಡದ ಗುರುರಾಘವೇಂದ್ರ ರಾಯರ ಸನ್ನಿಧಿಯ ಮಂತ್ರಾಲಯ, ಹನುಮಂತ ಜನ್ಮಸ್ಥಳವಾದ ಅಂಜನಾದ್ರಿ, ವಿಜಯನಗರ ಸಾಮ್ರಾಜ್ಯದ ತವರು ಹಂಪಿ; ದೇವಲ ಗಾಣಗಾಪುರದ ಭೀಮಾಅಮರ್ಜಾ ಸಂಗಮದಲ್ಲಿನ ದತ್ತ ಮಹಾರಾಜರ ಗಾಣಗಾಪುರ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕದ ನಾನಾ ಜಿಲ್ಲೆಗಳು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದಿಂದ ಬಂದ ಜನಸ್ತೋಮವೇ ನೆರೆದಿರುತ್ತದೆ.

ಕೃಷ್ಣಾನದಿ ತೀರದ ಬೇಣಕಲ್ಲ ಅಣೆಮಲ್ಲೇಶ್ವರ, ಗೂಗಲ್ ಅಲ್ಲಮಪ್ರಭು, ವಿರಘೋಟದ ಅಡವಿಲಿಂಗ, ಕೊಪ್ಪರದ ನರಸಿಂಹ ದೇವಾಲಯ ಹೂವಿನಹೆಡಗಿ ಸೇತುವೆ ಸಮೀಪದ ಗಡ್ಡೆಗೂಳಿ ಬಸವೇಶ್ವರ ದೇವಸ್ಥಾನಗಳ ತೀರ; ತುಂಗಾಭದ್ರ ತೀರದ ಹುಲಿಗೆಮ್ಮ ದೇವಸ್ಥಾನ, ಭೀಮಾ ನದಿಯ ಘತ್ತರಗಾ ಭಾಗ್ಯವಂತಿ ದೇವಿ ದೇವಸ್ಥಾನ, ಸನ್ನತಿಯ ಚಂದ್ರಲಾಂಬೆಯ ದೇವಿ ದೇವಸ್ಥಾನ, ಹುರಸಗುಂಡಗಿಯ ಶಹಾಪುರ ಭೀಮರಾಯ ದೇವರ ಪುಣ್ಯಸ್ನಾನದ ಕ್ಷೇತ್ರ, ಅಬ್ಬೆತುಮಕೂರಿನ ವಿಶ್ವಾರಾಧ್ಯ ಮಠದ ಸೇರಿದಂತೆ ಇತ್ಯಾದಿ ಧಾರ್ಮಿಕ ಕ್ಷೇತ್ರಗಳು, ನದಿ ಪಾತ್ರದ ಎರಡೂ ಕಡೆಗಳಲ್ಲಿನ ನೂರಾರು ಗ್ರಾಮಗಳಲ್ಲಿ ಸಾವಿರಾರು ಜನರು ಕೂಡುವರು.

ಎಳ್ಳುಕಾಳು, ಅರಿಶಿನ, ಬಿಸಿ ಕೊಬ್ಬರಿ ಎಣ್ಣೆ, ಬೇವಿನ ಎಲೆಯ ಮಿಶ್ರಣವನ್ನು ಮಾಡಿ ಮೈತುಂಬ ತೀಡಿಕೊಂಡು ಪುಣ್ಯ ಸ್ನಾನ ಮಾಡುವರು. ನದಿ ದಂಡೆಯಲ್ಲೇ ಕುಟುಂಬ ಸಮೇತರಾಗಿ ನಿಂತು ಗಂಗಾಮಾತೆಗೆ ಭಕ್ತಿಯಿಂದ ಪೂಜೆಯೂ ಸಲ್ಲಿಸುವರು. ತಾವು ಹೊತ್ತು ತಂದಿರುವ ಬುಟ್ಟಿಯಲ್ಲಿನ ನೈವೇದ್ಯವನ್ನು ನೀರಲ್ಲಿ ಬಿಟ್ಟು ಸೂರ್ಯದೇವನನ್ನು ಪ್ರಾರ್ಥಿಸುವರು. ಇದಕ್ಕೂ ಮೊದಲೇ ಮನೆಯಲ್ಲಿ ಜಾನುವಾರುಗಳಿಗೂ ಪೂಜೆ ಮಾಡಿ, ಹಬ್ಬದ ಖಾದ್ಯಗಳನ್ನು ತಟ್ಟೆಯಲ್ಲಿ ಮಿಶ್ರಣ ಮಾಡಿ ಅವುಗಳಿಗೆ ತಿನಿಸುವರು.

ಸ್ನಾನ ಮುಗಿಸಿ, ಹೊಸ ಬಟ್ಟೆಗಳನ್ನು ತೊಟ್ಟು ನದಿಯ ದಡದಲ್ಲಿ ಸೊಂಪಾಗಿ ಬೆಳೆದ ಹಸಿರ ಹಾಸಿನ ಮೇಲೆ, ಕಲ್ಲು ಬಂಡೆಗಳ ಮೇಲೆ ಎಲ್ಲರೂ ಒಟ್ಟಾಗಿ ಕೂರುವರು. ಜೋಳದರೊಟ್ಟಿ, ಶೇಂಗಾ ಎಳ್ಳಿನ ಹೋಳಿಗೆ, ಬಾನ, ನವಣೆ ಅನ್ನ, ಶೇಂಗಾ ಪುಡಿ, ಹಪ್ಪಳ, ಸಂಡಿಗೆ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ, ಭಜ್ಜಿ, ಕಾಳು, ಎಣ್ಣೆಗಾಯಿ, ಅನ್ನಾ–ಸಾರು, ಚಪಾತಿ, ವಿವಿಧ ಬಗೆಯ ಪಲ್ಯಗಳನ್ನು ಸವಿಯುವರು. ತಮ್ಮ ತಮ್ಮ ಮನೆಗಳಿಂದ ತಂದಿದ್ದ ಹಬ್ಬದ ಖಾದ್ಯಗಳನ್ನು ಪರಸ್ಪರ ಹಂಚಿಕೊಂಡು ಸಮರಸದ ಭಾವವೂ ಸಾರುವರು. ■

## ಸಮತೋಲನದ ಪರಿಪಾಟ

‘ಪ್ರಕೃತಿಯೊಂದಿಗೆ ಬೆರೆತು ಹಬ್ಬಗಳನ್ನು ವೈಜ್ಞಾನಿಕವಾಗಿ ಆಚರಿಸುವುದನ್ನು ಹಿರಿಯರು ಕಲಿಸಿದ್ದಾರೆ. ಮೈ ಕೊರೆಯುವ ಚಳಿ ಋತುವಿನಿಂದ ಹೊರಬಂದು, ಹೊಸ ಚೈತನ್ಯದೊಂದಿಗೆ ಬೇಸಿಗೆಯ ಬಿಸಿಲಿಗೆ ದೇಹ ಹೊಂದಿಕೊಳ್ಳುವುದು ಅವಶ್ಯ. ಸೂರ್ಯ ಪಥ ಬದಲಿಸುವಾಗ ಮೈಗೆ ಎಳ್ಳು, ಅರಿಶಿನ ಹಚ್ಚಿಕೊಂಡು ನದಿ ನೀರಲ್ಲಿ ಪುಣ್ಯ ಸ್ನಾನ ಮಾಡಿ ಎಳ್ಳು, ಶೇಂಗಾ ಹೋಳಿಗೆಯಂತಹ ಎಣ್ಣೆ ಅಂಶದ ಪದಾರ್ಥಗಳನ್ನು ತಿನ್ನುವ ರೂಢಿಯಾಗಿಸಿದ್ದಾರೆ. ಪ್ರಕೃತಿಯ ಏರುಪೇರುಗಳೊಂದಿಗೆ ಸಮತೋಲನದಿಂದ ಬದುಕುವ ಪರಿಪಾಟವಿದು’ ಎನ್ನುವರು ಹಿರಿಯ ಸಂಶೋಧಕ ಡಿ.ಎನ್. ಅಕ್ಕಿ.

ಭಾರತದಲ್ಲಿ ಒಂದೊಂದು ಪ್ರದೇಶದ ವಾತಾವರಣ, ಪರಿಸರ, ಭೂರಚನೆಯೂ ಭಿನ್ನವಾಗಿದೆ. ಆಯಾ ಪ್ರದೇಶಕ್ಕೆ ಅನುಗುಣವಾದ ಆಚರಣೆಗಳಿವೆ. ಸಂಕ್ರಾಂತಿಯ ವೇಳೆ ಜಾನುವಾರುಗಳನ್ನು ಒಣ ಹುಲ್ಲಿಗೆ ಬೆಂಕಿ ಹಚ್ಚಿ ಅದರ ಮೇಲಿಂದ ಕಿಚ್ಚು ಹಾಯಿಸುವ ಸಂಪ್ರದಾಯ ದಕ್ಷಿಣ ಕರ್ನಾಟಕದ್ದು. ಉತ್ತರ ಕರ್ನಾಟಕದಲ್ಲಿ ನವಣೆ, ಸಜ್ಜೆಯಂತಹ ಸಿರಿಧಾನ್ಯಗಳು ಬೆಳೆಯುವುದು ವಾಡಿಕೆ. ಸಂಕ್ರಾಂತಿಯಲ್ಲಿ ಸೂರ್ಯ, ನದಿ ಆರಾಧಿಸಿ, ಹೊಸದಾಗಿ ಬೆಳೆದ ಸಿರಿಧಾನ್ಯಗಳನ್ನು ಉಣ್ಣುವ ಪದ್ಧತಿ ಇದೆ. ಪ್ರಾದೇಶಿಕ ಆಹಾರ ಪದ್ಧತಿಗಳನ್ನು ಕಾಪಾಡುವ ಹೊಣೆಗಾರಿಕೆಯ ಜೊತೆಗೆ ಎಲ್ಲರೂ ಒಟ್ಟಾಗಿ ಕುಳಿತು ಸಮರಸ ಕಾಯ್ದುಕೊಳ್ಳುವುದು ಉದ್ದೇಶವೂ ಇದರಲ್ಲಿ ಅಡಗಿದೆ ಎನ್ನುತ್ತಾರೆ.

ಸೂರ್ಯನ ಪಥ ಬದಲಾವಣೆಯ ಸಂಧಿಕಾಲ ಅಪಾಯ ಎಂಬುದು ಪ್ರತೀತಿ. ಅಪಾಯದ ಗಳಿಗೆಯಲ್ಲಿ ದೇವರ ಸನ್ನಿಧಿಯ ನದಿಗಳಲ್ಲಿ ಪುಣ್ಯಸ್ನಾನ ಮಾಡಿದರೆ ಮಾನಸಿಕವಾಗಿ ಹೊಸತನ ಬರುತ್ತೆ ಎಂಬ ವಿಶ್ವಾಸವೂ ಇದೆ. ನಮ್ಮ ಪೂರ್ವಿಕರು ತಲೆಮಾರುಗಳಿಂದ ಪುಣ್ಯ ಸ್ನಾನ ಮಾಡಿ, ಭಕ್ಷ್ಯ ಭೋಜನವನ್ನು ಸವಿಯುವ ಪದ್ಧತಿ ಕೊಟ್ಟಿದ್ದಾರೆ ಎನ್ನುತ್ತಾರೆ ಹಿರಿಯರಾದ ಜೆ. ಆಗಸ್ಟಿನ್.

ಮೊದಲೆಲ್ಲ ಬಡತನ ವಿಪರೀತವಾಗಿತ್ತು. ಹಬ್ಬಕ್ಕೆ ಸಾಲ ಮಾಡಿಯಾದರೂ ಹಬ್ಬದೂಟ ಮಾಡು ಎನ್ನುವಂತೆ ಇತ್ತು. ಪ್ರತಿಯೊಬ್ಬರಿಗೂ ಭಕ್ಷ್ಯ ಭೋಜನ ಮಾಡಲು ಆಗುತ್ತಿರಲಿಲ್ಲ. ಸಂಕ್ರಮಣದ ನೆಪದಲ್ಲಿ ಎಲ್ಲರೂ ಒಗ್ಗೂಡಿ, ಮನೆಯಿಂದ ಹೊರ ಹೋಗಿ ನದಿಯಲ್ಲಿ ಪುಣ್ಯಸ್ನಾನ ಮಾಡಿ ಪ್ರಕೃತಿಯ ಮುಂದೆ ಎಲ್ಲರೂ ಒಂದೇ ಎಂದುಕೊಂಡು ಒಂದೆಡೆ ಕುಳಿತು ಹಬ್ಬದೂಟ ಸವಿಯುತ್ತಿದ್ದರು. ಇದರೊಟ್ಟಿಗೆ ಹೊಸದಾಗಿ ಬೆಳೆದ ಧಾನ್ಯಗಳು ಹಂಚಿಕೆಯಾಗಲಿ ಎಂಬ ಆಸೆಯೂ ಇತ್ತು. ‘ಎಳ್ಳು ಬೆಲ್ಲ ಕೊಟ್ಟು ಎಳ್ಳು ಬೆಲ್ಲದ್ಹಾಂಗ್ ಇರೋಣ’ ಎಂಬ ಚಿಂತನೆಯೂ ಇತ್ತು ಎನ್ನುವರು.



### ಗಂಗಾದೇವಿಗೆ ವಿಶೇಷ ಪೂಜೆ

ಅಬ್ಬೆತುಮಕೂರಿನ ವಿಶ್ವಾರಾಧ್ಯ ಮಠದ ಪೀಠಾಧಿಪತಿ ಗಂಗಾಧರ ಸ್ವಾಮೀಜಿ ಅವರು ಸಾವಿರಾರು ಭಕ್ತರೊಂದಿಗೆ ಮಂಗಲ ವಾದ್ಯಗಳು ಮತ್ತು ಸುಮಂಗಲೆಯರ ಕಳಸ ಸಹಿತ ಮೆರವಣಿಗೆಯೊಂದಿಗೆ ಭೀಮಾ ನದಿಗೆ ತೆರಳುತ್ತಾರೆ. ನದಿಯ ಮಧ್ಯ ಭಾಗದಲ್ಲಿ ಗಂಗಾದೇವಿಗೆ ವಿಶೇಷ ಪೂಜೆ ಸಲ್ಲಿಸುವರು. ಆ ಬಳಿಕ ನೆರೆದಿರುವ ಭಕ್ತರಿಗೆ ಬಿಳಿ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಶೇಂಗಾ ಹೋಳಿಗೆ, ಕರಿಗಡಬು, ಪುಂಡಿಪಲ್ಯ, ಹಿಂಡಿಪಲ್ಯ, ಎಣ್ಣೆ ಬದನೆಕಾಯಿ, ಶೇಂಗಾ ಹಿಂಡಿ, ಬಜ್ಜಿ, ಭರ್ತಾ, ಚಿತ್ರಾನ್ನ... ಹೀಗೆ ವಿವಿಧ ಬಗೆಯ ಸಂಕ್ರಾಂತಿಯ ಭಕ್ಷ್ಯ ಭೋಜನ ಬಡಿಸಲಾಗುತ್ತದೆ.